# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 881
ಸದಸ್ಯರ ಹೆಸರು : ಶ್ರೀ ಎಂ.ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 16.12.2024
ಉತ್ತರಿಸುವವರು : ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ಹಲವಾರು ಪ್ರದೇಶಗಳಲ್ಲಿನ ಕಾಡಂಚಿನಲ್ಲಿ ಈಗಲೂ ವಾಸಿಸುವ ನಾಗರೀಕರಿಗೆ ಮೂಲಭೂತ ಸೌಲಭ್ಯಗಳು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಹೌದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| (ಆ) | ಖಾನಾಪೂರದ ಭೀಮಗಡ ಅಭಯಾರಣ್ಯದ ವ್ಯಾಪ್ತಿಯ ಗ್ರಾಮಗಳಾದ ತಳೇವಾಡಿ, ಪಾಸ್ಟೋಲಿ, ಗವಾಳಿ, ಕೃಷ್ಣಾಪುರ ಮತ್ತು ಹೊಳದಾ ಗ್ರಾಮದ ಗ್ರಾಮಸ್ಥರು ಇನ್ನೂ ಕಾಡಲ್ಲಿ ಮತ್ತು ಕಾಡಂಚಿನಲ್ಲಿ ವಾಸವಾಗಿದ್ದು ಇವರಿಗೆ ಮೂಲಭೂತ ಸೌಕರ್ಯಗಳಾದ ಸಾರಿಗೆ ವ್ಯವಸ್ಥೆ, ವಿದ್ಯುತ್ ಸಂಪರ್ಕ, ವೈದ್ಯೋಪಚಾರ ಇಲ್ಲದೇ ತೊಂದರೆ ಅನುಭವಿಸುತ್ತಿದ್ದ ಈ ಗ್ರಾಮದಲ್ಲಿ ತುರ್ತು ಪರಿಸ್ಥಿತಿಯಲ್ಲಿ ವೈದ್ಯೋಪಚಾರ ಬೇಕಾದಲ್ಲಿ ಕನಿಷ್ಠ 10 ಕಿ.ಮೀ. ನಡೆದು ಬಂದು ಆಂಬ್ಯುಲೆನ್ಸ್ ಸೇವೆ ಪಡೆಯಬೇಕಾದ ಪರಿಸ್ಥಿತಿ ಉಂಟಾಗಿದ್ದು, ಇದು ಸರ್ಕಾರದ ಗಮನದಲ್ಲಿದೆಯೇ: ಇದ್ದಲ್ಲಿ, ಈ ಕುರಿತು ಕೈಗೊಂಡಿರುವ ಕ್ರಮಗಳೇನು: | **ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಉತ್ತರ:-**<br><br>ಬೆಳಗಾವಿ ಜಿಲ್ಲೆಯ ಖಾನಾಪೂರದ ಭೀಮಗಡ ಅಭಯಾರಣ್ಯದ ವ್ಯಾಪ್ತಿಯಲ್ಲಿ ಬರುವ ನೇರಸೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮಗಳಾದ (1) ಪಾಸ್ಟೋಲಿ ಮತ್ತು (2) ಗವಾಳಿ ಗ್ರಾಮಗಳಿಗೆ ಹೆಸ್ಕಾಂ ಮೂಲಕ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ ಹಾಗೂ (3) ತಳೆವಾಡಿ ಗ್ರಾಮಕ್ಕೆ ಸೋಲಾರ ಪ್ಲಾಂಟ್ ಅಳವಡಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಮುಂದುವರೆದು, ಶಿರೋಲಿ ಗ್ರಾಮ ಪಂಚಾಯತ ವ್ಯಾಪ್ತಿಯ (1)ಹೊಲ್ದಾ ಮತ್ತು (2)ಕೃಷ್ಣಾಪೂರ ಗ್ರಾಮಗಳಿಗೆ ಸೋಲಾರ ಪ್ಲಾಂಟ್ ಅಳವಡಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಈ ಗ್ರಾಮಗಳು ಭೀಮಗಡ ಅಭಯಾರಣ್ಯ ವ್ಯಾಪ್ತಿಯಲ್ಲಿ ಬರುವುದರಿಂದ ಹೊಸದಾಗಿ ರಸ್ತೆ ಮಾಡಲು ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಸೆಕ್ಷನ್-2ರ ಪ್ರಕಾರ ಅರಣ್ಯ ತಿರುವಳಿಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿರುತ್ತದೆ.<br><br>ಆದಾಗ್ಯೂ, ಈ ಗ್ರಾಮದ ಜನರಿಗೆ ತುರ್ತು ಪರಿಸ್ಥಿತಿಯಲ್ಲಿ ವೈದ್ಯೋಪಚಾರ ನೀಡಲು ಅನಾನೂಕೂಲವಾಗಿರುವ ಕಾರಣ ಈ ಗ್ರಾಮಗಳಲ್ಲಿ ಗ್ರಾಮಠಾಣಾ ವ್ಯಾಪ್ತಿಯಲ್ಲಿ ರಸ್ತೆ ಚರಂಡಿ ಕಾಮಗಾರಿಗಳನ್ನು ಅನುದಾನದ ಲಭ್ಯತೆಗೆ ಅನುಗುಣವಾಗಿ ಈಗಾಗಲೇ ಮೂಲಭೂತ ಸೌಕರ್ಯ ಒದಗಿಸಲಾಗಿದೆ. ಜಲಜೀವನ್ ಮಿಷನ್ ಯೋಜನೆಯಡಿ ಪ್ರತಿ ಮನೆಗೆ ನಳ ಸಂಪರ್ಕ ಕಲ್ಪಿಸಿ ಮೇಲ್ಕಂಡ ಎಲ್ಲ ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ ಎಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಳಗಾವಿ ರವರು ವರದಿ ಸಲ್ಲಿಸಿರುತ್ತಾರೆ.<br><br>**ಅರಣ್ಯ ಇಲಾಖೆಯ ಉತ್ತರ:-**<br>ಮುಂದುವರೆದು, ವನ್ಯಜೀವಿಧಾಮದ ಅರಣ್ಯೇತರ ಪ್ರದೇಶಗಳಲ್ಲಿ ವಿದ್ಯುತ್ ಸಂಪರ್ಕ, ಕುಡಿಯುವ ನೀರು ಮತ್ತು ಇತರೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಇಲಾಖೆಯಿಂದ ನಿರ್ಬಂಧಗಳಿರುವುದಿಲ್ಲ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಇ) | ಈ ರೀತಿ ಕಾಡಿನಲ್ಲಿ ಅಥವಾ ಕಾಡಂಚಿನಲ್ಲಿ ವಾಸಿಸುವ ನಾಗರೀಕರಿಗೆ ಯಾವ ಯೋಜನೆಯಡಿಯಲ್ಲಿ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ; ಈ ಯೋಜನೆಗಾಗಿ ನಿಗಧಿಪಡಿಸಿರುವ ಅನುದಾನವೆಷ್ಟು: | ಅಲ್ಲದೇ, ಈಗಾಗಲೇ ಇರುವ ರಸ್ತೆಗಳನ್ನು ಮೂಲ ಸ್ವರೂಪದಲ್ಲಿ ಬದಲಾಗದಂತೆ ದುರಸ್ತಿಗೊಳಿಸಲು ಇಲಾಖೆಯ ನಿರ್ಬಂಧಗಳಿರುವುದಿಲ್ಲ.<br><br>ಆದರೆ, ವನ್ಯಜೀವಿಧಾಮದಲ್ಲಿನ ಅರಣ್ಯೇತರ ಪ್ರದೇಶಗಳನ್ನು ಹೊರತುಪಡಿಸಿ ಉಳಿದ ಅರಣ್ಯ ಪ್ರದೇಶಗಳಲ್ಲಿ ಹೊಸದಾಗಿ ಮೂಲಭೂತ ಸೌಕರ್ಯಗಳಾದ ವಿದ್ಯುತ್ ಸಂಪರ್ಕ, ರಸ್ತೆ ನಿರ್ಮಾಣ, ಕುಡಿಯುವ ನೀರು ಮತ್ತು ಇತರೆ ಸೌಲಭ್ಯ ಕಲ್ಪಿಸಲು ಸಂಬಂಧಪಟ್ಟ ಉಪಯೋಗಿ ಸಂಸ್ಥೆಯವರು ವನ್ಯಜೀವಿ (ಸಂರಕ್ಷಣಾ) ಕಾಯ್ದೆ 1972ರನ್ವಯ ಅನುಮತಿ ಪಡೆಯಲು ಕೇಂದ್ರ ಸರ್ಕಾರದ https://parivesh.nic.in ವೆಬ್ ಪೋರ್ಟಲ್ ಮೂಲಕ ಪ್ರಸ್ತಾವನೆ ಸಲ್ಲಿಸಿ, ರಾಜ್ಯ ವನ್ಯಜೀವಿ ಮಂಡಳಿ/ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಯ ಅನುಮೋದನೆ ಪಡೆಯಬೇಕಾಗಿರುತ್ತದೆ. |
| (ಈ) | ಕಾಡಲ್ಲಿ ಮತ್ತು ಕಾಡಂಚಿನಲ್ಲಿ ವಾಸವಿರುವ ಜನರು/ನಾಗರಿಕರಿಗೆ ಪುನರ್ ವಸತಿ ಕಾರ್ಯಕ್ರಮಗಳ ಬಗ್ಗೆ ಅರಿವು ಮೂಡಿಸಲಾಗಿದೆಯೇ: ಇದ್ದಲ್ಲಿ, ಕಾಡಿನಿಂದ ನಗರಕ್ಕೆ ಸ್ಥಳಾಂತರ ಹೊಂದಲು ಎಷ್ಟು ಗ್ರಾಮಸ್ಥರು ಒಪ್ಪಿಕೊಂಡಿದ್ದಾರೆ. ಸ್ಥಳಾಂತರ ಹೊಂದಲು ಒಪ್ಪಿಕೊಂಡಿರುವ ಗ್ರಾಮಸ್ಥರಿಗೆ ಯಾವ ಸೌಲಭ್ಯಗಳನ್ನು ಸರ್ಕಾರದಿಂದ ಕಲ್ಪಿಸಲಾಗುವುದು; (ಮಾಹಿತಿ ನೀಡುವುದು) | ಅರಣ್ಯದಂಚಿನಲ್ಲಿ ವಾಸಿಸುವ ನಾಗರೀಕರಿಗೆ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ ನವದೆಹಲಿ ರವರು ದಿನಾಂಕ:15-10-2012 ರಂದು ಹೊರಡಿಸಿರುವ ಮಾರ್ಗಸೂಚಿಗಳ ಪ್ರಕಾರ ಸ್ವ-ಇಚ್ಛೆಯಿಂದ ಪುನರ್ ವಸತಿ ಪಡೆದುಕೊಳ್ಳಲು ಅರ್ಜಿ ಸಲ್ಲಿಸಿದ ಪ್ರತಿ ಕುಟುಂಬಕ್ಕೆ 2 ಆಯ್ಕೆಗಳನ್ನು ನೀಡಲಾಗಿದೆ.<br><br>1. ಅಭಯಾರಣ್ಯದಲ್ಲಿ ವಾಸಿಸುವ ಸ್ಥಳವನ್ನು ಬಿಟ್ಟುಕೊಟ್ಟು ಬೇರೆಕಡೆ ಹೋಗಲು ಸಿದ್ಧರಿರುವವರಿಗೆ ರೂ. 15.00 ಲಕ್ಷ ಪ್ಯಾಕೇಜ್ ಸೌಲಭ್ಯವನ್ನು ನೀಡಲಾಗುತ್ತದೆ.<br><br>2. ಅಭಯಾರಣ್ಯದಲ್ಲಿ ಅರಣ್ಯ ಇಲಾಖೆ ಯಿಂದ ಪುನರ್ವಸತಿ ಯೋಜನೆಗೆ ಸ್ಥಳ ಲಭ್ಯವಿದ್ದಲ್ಲಿ ಪ್ರತಿ ಅರ್ಹ ಕುಟುಂಬಕ್ಕೆ ರೂ. 15.00 ಲಕ್ಷ ಮೌಲ್ಯದ 2(ಎರಡು) ಹೆಕ್ಟೇರ್ ಕೃಷಿ ಭೂಮಿ ವಸತಿ ಜಾಗ ಮತ್ತು ಕಟ್ಟಡ ನಿರ್ಮಾಣ ಹಾಗೂ ಕುಟುಂಬಕ್ಕೆ ಬೇಕಾದ ಸೌಲಭ್ಯಗಳು ಮತ್ತು ಪ್ರೋತ್ಸಾಹ ಧನವನ್ನು ಹಂತ ಹಂತವಾಗಿ ನೀಡಲಾಗುವುದು.<br><br>ಭೀಮಗಡ ವನ್ಯಜೀವಿಧಾಮದಲ್ಲಿ ಸ್ವ-ಇಚ್ಛೆಯಿಂದ ಪುರ್ನವಸತಿಗೊಳ್ಳಲು ಇಚ್ಛಿಸಿರುವ ತಳೆವಾಡಿ ಗ್ರಾಮದ ಒಟ್ಟು 56 ಕುಟುಂಬಗಳ ಪೈಕಿ 15 ಅರ್ಜಿಗಳಿಗೆ ದಿನಾಂಕ: 10-08-2024 ರಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಜಿಲ್ಲಾ ಮಟ್ಟದ ಪುರ್ನವಸತಿ ಸಮಿತಿಯ ಸಭೆಯಲ್ಲಿ ಅನುಮೋದನೆ ನೀಡಲಾಗಿರುತ್ತದೆ. ಅನುದಾನದ ಲಭ್ಯತೆ ಅನುಗುಣವಾಗಿ ನಿಯಮಾನುಸಾರ ಪುನರ್ವಸತಿ ಕಾರ್ಯ ಕ್ರಮವನ್ನು ಆದ್ಯತೆ ಮೇರೆಗೆ ಅನುಷ್ಠಾನ ಗೊಳಿಸಲಾಗುತ್ತಿದೆ. |

**ಸಂಖ್ಯೆ: ಅಪಜೀ 48 ಎಫ್‌ಟಿಎಸ್ 2024**

**(ಈಶ್ವರ ಬಿ.ಖಂಡ್ರೆ)**
ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು